ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 16.12.2025.

ಪಾಟೀ ಸವಾಲು ಃ ವಾದಿ ಪರ ಶ್ರೀ. ಕೆ.ಜೆ.ಎನ್ ವಕೀಲರಿಂದ

1. ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದಾನೆ, ಆತನ ಹೆಸರು ಅಶ್ವತ್ ಆಗಿರುತ್ತದೆ.

2. ಮೃತ ನಾಗೇಗೌಡರು ನನಗೆ ಸುಮಾರು 50 ವರ್ಷಗಳಿಂದ ಪರಿಚಯ ಇದ್ದಾರೆ. ನಾನು ಮತ್ತು ಮೃತ ನಾಗೇಗೌಡ ಸಹೋದರರಾಗಬೇಕು ಮತ್ತು ಒಂದೇ ಮನೆಯಲ್ಲಿ ವಾಸವಾಗಿದ್ದೆವು. ಮೃತ ನಾಗೇಗೌಡ ನನಗೆ ಸಹೋದರನಾಗಬೇಕು ಎಂದು ತೋರಿಸಲು ನಾನು ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ ನಿಪಿ-4 ನ್ನು ತೋರಿಸಲಾಗಿ ಅದರಲ್ಲಿ ನನ್ನ ಹೆಸರಿಲ್ಲ ಎಂದು ನುಡಿದು ನಂತರ ನಾನು ಮೃತ ನಾಗೇಗೌಡನ ಚಿಕ್ಕಪ್ಪನ ಮಗ ಎಂದು ನುಡಿಯುತ್ತಾರೆ. ನಾನು ಮೃತ ನಾಗೇಗೌಡನಿಗೆ ಯಾವುದೇ ರೀತಿಯ ಸಂಬಂಧಿಕನಲ್ಲ, ನಾನು ಕೇವಲ ಸ್ನೇಹಿತ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಮೃತ ಮೃತ ನಾಗೇಗೌಡ ಅಣ್ಣ ತಮ್ಮಂದಿರ ರೀತಿ ಇದ್ದೆವು ಎಂದು ನುಡಿಯುತ್ತಾರೆ. ಸಾಕ್ಷಿಗೆ ಭಾವಚಿತ್ರಗಳ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಅದರಲ್ಲಿ ಇರುವವನು ನನ್ನ ಮಗ ಅಶ್ವತ್ ಎಂದು ಗುರುತಿಸಿದ ಕಾರಣ ಸದರಿ ಭಾವಚಿತ್ರಗಳನ್ನು ಗುರುತಿನ ಉದ್ದೇಶಕ್ಕಾಗಿ ಒಟ್ಟಾಗಿ ನಿ ಎಸ್ - 1 ಎಂದು ಗುರುತಿಸಲಾಯಿತು. ಮೃತ ನಾಗೇಗೌಡರು ಮರಣ ಹೊಂದಿದ ಕೂಡಲೇ ನಾನು ಮತ್ತು ನನ್ನ ಮಗ ಇಬ್ಬರೂ ಸೇರಿ ಅವರ ಖಾತೆಯಿಂದ ಐವತ್ತು ಸಾವಿರ ರೂಪಾಯಿಯನ್ನು ಎ ಟಿ ಎಂ ನಲ್ಲಿ ಡ್ರಾ ಮಾಡಿಕೊಳ್ಳುವ ಸಮಯದಲ್ಲಿ ನಿ ಎಸ್ - 1 ನ್ನು ತೆಗೆಯಲಾಗಿದೆ ಎಂದರೆ ಸಾಕ್ಷಿಯು ಅದಕ್ಕೆ ನಾನು ಸೇರಿಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧವಾಗಿ ವಾದಿಯು ನನ್ನ ಮತ್ತು ನನ್ನ ಮಗನ ವಿರುದ್ಧ ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಹೋಗಿ ಪ್ರಕರಣವನ್ನು ರಾಜೀ ಮಾಡಿಕೊಳ್ಳುತ್ತೇವೆ ಮತ್ತು ಹಣವನ್ನು ವಾಪಸ್ಸು

ನೀಡುತ್ತೇವೆಂದು ಹೇಳಿಕೆ ನೀಡಿದ ಕಾರಣ ಪೋಲೀಸರು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಲೀಸ್ ಹಿಂಬರಹವನ್ನು ತೋರಿಸಲಾಗಿ ಅದನ್ನು ನೋಡಿ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ.

3. ಮೃತ ನಾಗೇಗೌಡರ ತಿಥಿಯನ್ನು ನಾನೇ ಮಾಡಿರುತ್ತೇನೆ ಎಂದು ತಿಳಿಸಿದ್ದು ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೃತ ನಾಗೇಗೌಡರ ತಿಥಿ ಕಾರ್ಯವನ್ನು ವಾದಿಯೆ ಮಾಡಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನಾಗೇಗೌಡ ಮತ್ತು ನಾನು ಪರಸ್ಪರ ಸ್ನೇಹಿತರಾಗಿದ್ದು ಆತನ ಬಳಿ ಹಣ ಇರುವುದನ್ನು ತಿಳಿದು ನಾನು ಆತನ ಜೊತೆ ಮದ್ಯಪಾನ ಮಾಡಿಕೊಂಡು ಓಡಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ರೀತಿ ವಿಶ್ವಾಸದಿಂದ ಇದ್ದ ಕಾರಣ ಬಲವಂತವಾಗಿ ನಾನು ನನ್ನ ಹೆಸರನ್ನು ನಾಮಿನಿಯಾಗಿ ಖಾತೆ ತೆರೆಯುವಾಗ ಬ್ಯಾಂಕಿನಲ್ಲಿ ಸೇರಿಸಿಕೊಂಡಿರುತ್ತೇನೆ ಎಂದರೆ ಸುಳ್ಳು.

4. ನಾನು ಹಾಜರುಪಡಿಸಿರುವ ಆಸ್ಪತ್ರೆಯ ದಾಖಲೆಗಳನ್ನು ಮೃತ ನಾಗೇಗೌಡರ ಮನೆಯಿಂದ ತೆಗೆದುಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸುಳ್ಳು. ಆಸ್ಪತ್ರೆಯ ದಾಖಲೆಗಳ ಜೊತೆ ಮೃತ ನಾಗೇಗೌಡರ ಎ ಟಿ ಎಂ ಕಾರ್ಡನ್ನು ಸಹ ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸುಳ್ಳು. ವಿಶ್ವಾಸದಿಂದ ಇರುವ ಕಾರಣ ಎ ಟಿ ಎಂ ಪಿನ್‌ನ್ನು ತಿಳಿದು ಅವರು ಮೃತರಾದ ನಂತರ ಹಣ ಡ್ರಾ ಮಾಡಿರುತ್ತೇನೆ ಎಂದರೆ ಸುಳ್ಳು. ಪಿ ಡಬ್ಲ್ಯೂ -1 ರವರ ಮೇಲೆ ಮಾಡಿರುವ ಎಲ್ಲಾ ಆರೋಪಗಳು ಸುಳ್ಳು ಎಂದರೆ ಸರಿಯಲ್ಲ. ಮೃತ ನಾಗೇಗೌಡರ ಪಾಲನೆ ಪೋಷಣೆಯನ್ನು ನಾನು ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅನಾರೋಗ್ಯ ಆಗಿದ್ದು, ಆಕೆಯು ಮೃತಳಾದರೆ ಆಕೆಗೆ ವಾರಸುದಾರರು ಯಾರು ಇಲ್ಲ ಎಂದು ತಿಳಿದು ಹಣ ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.